ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅಷ್ಟು ಹಣವನ್ನು ಈಗ ನಾವು ಎಲ್ಲಿಂದ ತರುವುದು? ನಾನೂ ಕೂಡ ಈಗ ಉಡುಪಿ ಜಿಲ್ಲಾ ಕೈಗಾರಿಕಾ ಎಕ್ಸ್‌ಟೆನ್‌ಷನ್‌ನ ಅಧ್ಯಕ್ಷನಾಗಿದ್ದೇನೆ, ಮೊನ್ನೆ ನಾವು ಚರ್ಚೆ ಮಾಡಿದ್ದೇವೆ, ಈ ರೀತಿ 8 ಲಕ್ಷ ರೂಪಾಯಿಗಳನ್ನು ಕೇಳಿದರೆ ಹೇಗೆ?

ಶ್ರೀ ಬಿ.ಎ.ಮೊಹಿದ್ದೀನ್: ತಾವು ಅಂಥ ನಿರ್ದಿಷ್ಟವಾದ ಪ್ರಕರಣಗಳೇನಾದರೂ ಇದ್ದರೆ ನನಗೆ ಕೊಡಿ, ನಾನು ಅದನ್ನು ಪರಿಶೀಲನೆ ಮಾಡುತ್ತೇನೆ, ಆ ರೀತಿಯಾಗುವುದಕ್ಕೆ ಸಾಧ್ಯವೇ ಇಲ್ಲ.

ವಿಷಯ: ಪೌರಾಡಳಿತ ಇಲಾಖೆಗೆ ಬರುವ ಆದಾಯ.

240 (1648)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೌರಾಡಳಿತ ನಿರ್ದೇಶನಾಲಯ ಎಂದಿನಿಂದ ಪ್ರಾರಂಭವಾಯಿತು ಹಾಗೂ ಇದರ ಕಾರ್ಯಗಳ ವಿವರಗಳನ್ನೊದಗಿಸುವುದು.

ಆ) ಪೌರಾಡಳಿತ ಇಲಾಖೆಗೆ ವಿವಿಧ ಮೂಲಗಳಿಂದ ಬರುವ ಆದಾಯವೆಷ್ಟು?

ಇ) ಈ ಇಲಾಖೆಯನ್ನು ರದ್ದುಗೊಳಿಸಿ ಈ ಹಿಂದೆ ಇದ್ದಂತೆ ಆಯಾ ವಿಭಾಗಾಧಿಕಾರಿಗಳಿಗೆ ಇದರ ಕಾರ್ಯಭಾರವನ್ನು ವಹಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಇದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಮೀರಾಜುದ್ದಿನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಪೌರಾಡಳಿತ ನಿರ್ದೇಶನಾಲಯವು 1984ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ಪುರಸಭೆ ಕಾಯಿದೆ 1964ರಲ್ಲಿ ದತ್ತವಾದ ಅಧಿಕಾರವನ್ನು ನಿರ್ವಹಿಸುವುದು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಎಲ್ಲಾ ಅಧಿಕಾರಿ ನೌಕರರ ಸೇವಾ ವಿಷಯಗಳನ್ನು ನಿರ್ವಹಿಸುವುದು.

ಆ) ಪೌರಾಡಳಿತ ನಿರ್ದೇಶನಾಲಯಕ್ಕೆ ಯಾವುದೇ ಆದಾಯ ಮೂಲಗಳು ಇರುವುದಿಲ್ಲ.

ಇ) ರಾಜ್ಯ ಹಣಕಾಸು ಆಯೋಗ ಹಾಗೂ 1995-96ನೇ ವಸತಿ ಮತ್ತು

ನಗರಾಭಿವೃದ್ಧಿ ಇಲಾಖಾ ವಿಷಯ ಸಮಿತಿಗಳು ತಮ್ಮ 1995-96ನೇ ಸಾಲಿನ ವರದಿಗಳಲ್ಲಿ ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಗೊಳಿಸಲು ಶಿಫಾರಸ್ಸು ಮಾಡಿವೆ. ಈ ಶಿಫಾರಸ್ಸುಗಳನ್ವಯ ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಗೊಳಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ.

ಈ) ಮೇಲಿನ ಉತ್ತರದಿಂದಾಗಿ (ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

10.30 ಎ.ಎಂ

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಪೌರಾಡಳಿತ ಇಲಾಖೆಗೆ ವಿವಿಧ ಮೂಲಗಳಿಂದ ಬರುವ ಆದಾಯವೆಷ್ಟು ಎಂದು ನಾನು ನಿರ್ದಿಷ್ಟವಾಗಿ ಕೇಳಿದ್ದಕ್ಕೆ, ಪೌರಾಡಳಿತ ನಿರ್ದೇಶನಾಲಯಕ್ಕೆ ಯಾವುದೇ ಆದಾಯ ಮೂಲಗಳು ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಪೌರಾಡಳಿತ ಇಲಾಖೆಗೆ ವಿವಿಧ ಮೂಲಗಳಿಂದ ಬರುವ ಆದಾಯ ಎಷ್ಟು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಇನ್ನು 1995-96ನೇ ಇಸವಿಯಲ್ಲಿ ಪೌರಾಡಳಿತ ನಿರ್ದೇಶನಾಲಯವನ್ನು ರದ್ದು ಮಾಡಬೇಕೆಂದು ರಾಜ್ಯ ಹಣಕಾಸು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಡೂಪ್ಲಿಸಿಟಿ ಆಗುತ್ತದೆ ಮತ್ತು ಕೆಲಸದಲ್ಲಿ ಬಾಗ್‌ಡೌನ್ ಆಗುತ್ತದೆ ಎನ್ನುವ ಲೆಕ್ಕದಲ್ಲಿ ರದ್ದು ಮಾಡಬೇಕೆಂದು ಅದು ಶಿಫಾರಸ್ಸು ಮಾಡಿದೆ. ಆದರೆ ಇದನ್ನು ರದ್ದುಪಡಿಸುವ ಬಗ್ಗೆ ಇದುವರೆಗೂ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಏನಾಗಿದೆ ಎಂದರೆ ಸಾರ್ವಜನಿಕರಿಂದ ಬರುವಂಥ ಹಲವಾರು ಅರ್ಜಿಗಳು, ಬೇರೆ ಬೇರೆ ಮೂಲಗಳಿಂದ ಬರತಕ್ಕಂಥ ಹಲವಾರು ಅರ್ಜಿಗಳು, ಫೈಲ್‌ಗಳು ಈ ನಿರ್ದೇಶನಾಲಯಕ್ಕೆ ಹೋಗುತ್ತದೆ ನಂತರ ಅಲ್ಲಿಂದ ಪೌರಾಡಳಿತ ಇಲಾಖೆಗೆ ಬರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಮತ್ತು ನೌಕರರಿಗೆ ತೀರಾ ತೊಂದರೆಯಾಗುತ್ತದೆ. 1995-96ನೇ ಇಸವಿಯಲ್ಲಿ ನಿರ್ದೇಶನಾಲಯವನ್ನು ರದ್ದು ಮಾಡಲು ಸಲಹೆ ಕೊಟ್ಟಿದ್ದು ಅದನ್ನು ಸರ್ಕಾರ ಒಪ್ಪಿದ್ದರೂ ಕೂಡ, ಈಗ ಅದು ಪರಿಶೀಲನೆಯ ಹಂತದಲ್ಲಿದೆ ಎಂದು ಹೇಳುತ್ತಿದ್ದಾರೆ. ಯಾವಾಗ ಅದನ್ನು ಪರಿಶೀಲನೆ ಮಾಡಿ ರದ್ದು ಮಾಡುತ್ತಾರೆ ಮತ್ತು ಪೌರಾಡಳಿತ ಇಲಾಖೆಗೆ ಇರತಕ್ಕಂಥ ಆದಾಯ ಎಷ್ಟು ಎಂದು ಸ್ಪಷ್ಟವಾಗಿ ಉತ್ತರದಲ್ಲಿ ಹೇಳಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಪೌರಾಡಳಿತ ನಿರ್ದೇಶನಾಲಯವು 1984ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಅದಕ್ಕಿಂತ ಮೊದಲು ವಿಭಾಗಾಧಿಕಾರಿಗಳ ಕಂಟ್ರೋಲ್‌ನಿಂದಲೇ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಅದು ಆದನಂತರ ನಿರ್ದೇಶನಾಲಯವು ಬಂದು ಕರ್ನಾಟಕ ಪುರಸಭೆ ಕಾಯಿದೆ 1964ರಲ್ಲಿ ದತ್ತವಾದ ಅಧಿಕಾರವನ್ನು ನಿರ್ವಹಿಸುವುದು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಎಲ್ಲಾ ಅಧಿಕಾರಿ, ನೌಕರರ ಸೇವಾ ವಿಷಯಗಳನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಅದಕ್ಕೆ ಎಷ್ಟು ಹಣವನ್ನು ಒದಗಿಸಿದ್ದಾರೆಂದು ಕೇಳಿದ್ದಾರೆ ಅಲ್ಲಿಯ

ನೌಕರರಿಗೆ ಸಂಬಳಸಾರಿಗೆ ಕೊಡುವಂಥದ್ದು ಮತ್ತು ಎಸ್ಟಾಬ್ಲಿಷ್‌ಮೆಂಟ್‌ಗೆ ಕೊಡುವಂಥದ್ದು ಬಿಟ್ಟರೆ ನಿರ್ದೇಶನಾಲಯಕ್ಕೆ ಪ್ರತ್ಯೇಕವಾದಂಥ ಹಣ ಏನೂ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಪೌರಾಡಳಿತ ನಿರ್ದೇಶನಾಲಯಕ್ಕೆ ಎಷ್ಟು ಆದಾಯವಿದೆಯೆಂದು ನಾನು ಪ್ರಶ್ನೆ ಕೇಳಿಲ್ಲ. ನಾನು ನಿರ್ದಿಷ್ಟವಾಗಿ ಪೌರಾಡಳಿತ ಇಲಾಖೆಗೆ ಎಷ್ಟು ಆದಾಯವಿದೆಯೆಂದು ಕೇಳಿದ್ದೇನೆ. ಆದರೆ ನಿರ್ದೇಶನಾಲಯದ ಆದಾಯದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಕಳೆದ ಸಲ ಪೌರಾಡಳಿತ ಇಲಾಖೆಗೆ 287 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡಲಾಗಿತ್ತು. ಈ ಸಲ 350 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಇಡಲಾಗುತ್ತಿದ್ದು ಅದನ್ನು ಈ ಬಜೆಟ್‌ನಲ್ಲಿ ಪಾಸ್ ಮಾಡುತ್ತೇವೆ. ಈ ಹಣ ಪೌರಾಡಳಿತ ಇಲಾಖೆಯ ಒಟ್ಟು ಅಡ್ಮಿನಿಸ್ಟ್ರೇಷನ್ ಕಾರ್ಯಕ್ಕೆ ಆಗಿರುತ್ತದೆ. ಪೌರಾಡಳಿತ ಇಲಾಖೆಯಲ್ಲಿ 6 ಕಾರ್ಪೋರೇಷನ್‌ಗಳು, 40 ಸಿ.ಎಂ.ಸಿ.ಗಳು, 81 ಟಿ.ಎಂ.ಸಿ.ಗಳು, 88 ಟೌನ್ ಪಂಚಾಯಿತಿ ಸಂಸ್ಥೆಗಳು, ಹೀಗೆ ಒಟ್ಟು 215 ಸಂಸ್ಥೆಗಳು ಇದರ ಆಡಳಿತಕ್ಕೆ ಒಳಪಟ್ಟಿವೆ. ಇದಕ್ಕೆ ಇರತಕ್ಕಂಥ ಬಜೆಟ್ ಹಣ ನೇರವಾಗಿ ಖಜಾನೆಗೆ ಹೋಗುವಂಥದ್ದು ಅಲ್ಲಿ ಕೆಲಸ ಮಾಡುವಂಥ ನೌಕರರಿಗೆ ಹೋಗುವಂಥದ್ದು, ಮತ್ತು ಅಭಿವೃದ್ಧಿ ದಿಶೆಯಲ್ಲಿ ಅವರು ಪಾಲು ಅಲ್ಲಿಗೆ ಹೋಗುತ್ತದೆ. ಆಡಳಿತವನ್ನು ಮಾನಿಟರಿಂಗ್ ಮಾಡುವುದಕ್ಕೆ ಮತ್ತು ಅಲ್ಲಿ ಕೆಲಸ ಮಾಡುವಂಥ ನೌಕರರ ಸೇವಾ ಹಿರಿತನ ಇದನ್ನು ಗುರುತಿಸಲು ಪೌರಾಡಳಿತ ನಿರ್ದೇಶನಾಲಯವನ್ನು ಮಾಡಲಾಗಿದೆ. ವಿಷಯ ಸಮಿತಿ ಮತ್ತು ನಮ್ಮ ರಾಜ್ಯ ಹಣಕಾಸು ಆಯೋಗವು ಈ ನಿರ್ದೇಶನಾಲಯ ಬೇಡ, ಮಾನ್ಯ ಸದಸ್ಯರು ಹೇಳಿದ ಹಾಗೆ ಇಲ್ಲಿ ಡೂಪ್ಲಿಕೇಷನ್ ಆಗುತ್ತದೆ, ಇದು ಬಿಳಿ ಆನೆ ಅನ್ನತಕ್ಕಂಥ ರೀತಿಯಿಂದ ಹೇಳಿ ಇದನ್ನು ರದ್ದುಪಡಿಸಬೇಕೆಂದು ಹೇಳಿದ್ದರು. ರಾಜ್ಯದಲ್ಲಿ ಕೆಲವು ಇಲಾಖೆಗಳಲ್ಲಿ ಅಂದರೆ ಬಿ.ಡಿ.ಓ. ಇದನ್ನು ತೆಗೆಯಬೇಕೆನ್ನುವುದು, ಬಿ.ಇ.ಓ. ಇರುವ ಕಡೆ ಎ.ಇ.ಓ. ಇದನ್ನು ತೆಗೆಯಬೇಕೆನ್ನುವುದು, ಡಿವಿಜನಲ್ ಕಮಿಷನರ್ ಹುದ್ದೆಯನ್ನು ತೆಗೆದುಹಾಕಬೇಕೆನ್ನುವುದು ಹೀಗೆ ಕೆಲವು ವಿಚಾರಗಳು ಸರ್ಕಾರದ ಮುಂದಿದೆ. ಮಾನ್ಯ ವಾಟಾಳ್ ನಾಗರಾಜುರವರು ಪದೇಪದೇ ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುತ್ತಿರುತ್ತಾರೆ. ಆ ದೃಷ್ಟಿಯಿಂದ ಈ ನಿರ್ದೇಶನಾಲಯವನ್ನು ಉಳಿಸಿಕೊಳ್ಳಬೇಕೇ ಅಥವಾ ಬೇಡವೇ ಎನ್ನುವುದು ಮಾನ್ಯ ಮುಖ್ಯಮಂತ್ರಿಗಳ, ಸರ್ಕಾರದ ಮುಂದಿದೆ. ಇದರ ಬಗ್ಗೆ ಆದಷ್ಟು ಬೇಗ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಪೌರಾಡಳಿತ ಇಲಾಖೆಗೆ ಕಳೆದ ವರ್ಷ 280 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿರತಕ್ಕಂಥ ನೌಕರರಿಗೆ ಕಾಲಕಾಲಕ್ಕೆ

ಸರಿಯಾಗಿ ಸಂಬಳ ಕೊಡತಕ್ಕಂಥ ವ್ಯವಸ್ಥೆ ಕೂಡ ಆಗುತ್ತಿಲ್ಲ. ಕಸ ಗುಡಿಸುವವರಿಂದ ಹಿಡಿದು ಎಲ್ಲಾ ದರ್ಜೆಯ ನೌಕರರಿಗೆ ಕೂಡ ಸಂಬಳವನ್ನು ಕೊಡತಕ್ಕಂಥ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಕಳೆದ ವರ್ಷ ಅವರು ಹೋರಾಟ ಮಾಡಿದಾಗ ''ಖಜಾನೆಯಿಂದ ನೇರವಾಗಿ ಸಂಬಳ ಕೊಡುತ್ತೇವೆ'' ಎಂದು ಸರ್ಕಾರದವರು ಹೇಳಿದ್ದಾರೆ. ಆದರೆ ಇದುವರೆಗೂ ಕೂಡ ಅದು ಜಾರಿಯಾಗಿಲ್ಲ. ಅದಕ್ಕೆ ಈ ಬಜೆಟ್‌ನಲ್ಲಿ ಏನಾದರೂ ಪ್ರಾವಿಷನ್ ಮಾಡಿದ್ದೀರಾ?

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ವಿಶೇಷವಾಗಿ ಪೌರಾಡಳಿತ ಸಂಸ್ಥೆಗಳ ನೌಕರರಿಗೆ ವೇತನ ಕೊಡುವಂಥದ್ದನ್ನು ಮಾಡುತ್ತಾ ಬಂದಿದೆ. 'ತಿಮ್ಮಯ್ಯ ವರದಿ' ಪ್ರಕಾರ 'ಡಿವಲ್ಯೂಷನ್ ಆಫ್ ಫಂಡ್ಸ್'ನಲ್ಲಿ ಒಂದು ವರ್ಷಕ್ಕೆ 65 ಕೋಟಿ ರೂಪಾಯಿಯಂತೆ 5 ವರ್ಷಕ್ಕೆ ಒಟ್ಟು 325 ಕೋಟಿ ರೂಪಾಯಿಗಳನ್ನು ಕೊಡುವಂಥದ್ದು, ಇದು 2002ನೇ ಇಸವಿವರೆಗೆ ಕೊಡಬೇಕೆಂದು ಹೇಳಿದ್ದು, ಆ ತೀರ್ಮಾನದ ಮೇಲೆ ಕಳೆದ ವರ್ಷ 65 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿವು. ವರ್ಷದ ಕೊನೆಯ ತಿಂಗಳುಗಳಿಗೆ ಆ ಹಣ ಸ್ವಲ್ಪ ಸಾಕಾಗಲಿಲ್ಲ. ಈ ವರ್ಷ ಇನ್ನೂ 65 ಕೋಟಿ ರೂಪಾಯಿ ಹಣ ಬಿಡುಗಡೆ ಆದಾಗ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಹಣ ಸಿಗುತ್ತದೆ ಮತ್ತು ನೌಕರರ ಸಂಬಳಕ್ಕೂ ಸಹ ಹಣ ಸಾಕಾಗುತ್ತದೆ. ಜೊತೆಗೆ 10ನೇ ಹಣಕಾಸಿನ ಆಯೋಗದಿಂದ ಹಣ ಬಂದಿದೆ, ಇದರಿಂದಲೂ ಸಹ ಆ ಇಲಾಖೆಯಲ್ಲಿನ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಹಣ ಸಿಗುತ್ತದೆ. ಈ ವರ್ಷ ಮಾನ್ಯ ಸದಸ್ಯರು ಹೇಳಿದ ಹಾಗೆ ನೌಕರರಿಗೆ ಸಂಬಳ ಸಿಗುವ ದೃಷ್ಟಿಯಿಂದ ಅವರಿಗೆ ಯಾವುದೇ ತೊಂದರೆ ಆಗುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 24ನೇ ಸಂವಿಧಾನ ತಿದ್ದುಪಡಿ ತಂದಾಗಲೂ ಸಹ ಈ ಪೌರಾಡಳಿತ ನಿರ್ದೇಶನಾಲಯ ಪುರಸಭೆ, ನಗರಸಭೆಗಳಿಗೆ ಅಗತ್ಯವಾಗಿ ಇವತ್ತು ಬೇಕೇ ಎನ್ನುವುದು ಒಂದು ವಿಚಾರವಾಗಿದೆ. ಈ ಹಿಂದೆ ವಿಷಯಸಮಿತಿಗಳಲ್ಲಿ ಮತ್ತು ಬೇರೆ ಬೇರೆ ಚರ್ಚೆ ಹಂತದಲ್ಲಿ ನಿರ್ದೇಶನಾಲಯ ಬೇಡವಾಗಿದೆ ಆದ್ದರಿಂದ ಇದನ್ನು ತೆಗೆಯುವುದು ಉತ್ತಮವೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡಲಾಗಿತ್ತು. ಇದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇದು ಸರ್ಕಾರದ ಮುಂದಿದೆ. ಮಾನ್ಯ ಮುಖ್ಯಮಂತ್ರಿಯವರ ತೀರ್ಮಾನವಾಗಿ ಇದು ಸಚಿವಸಂಪುಟದ ಮುಂದೆ ಬರಬೇಕಾಗಿದೆ. ಈ ಬಗ್ಗೆ ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಒಂದು ಹಂತಕ್ಕೆ ಬಂದಿದ್ದಾರೆಂದು ತೋರುತ್ತದೆ. ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ನಗರಸಭೆಗಳು ಮತ್ತು ಪುರಸಭೆಗಳಿಗೆ ಸಂಪನ್ಮೂಲದ ಕೊರತೆ ಈಗ ಬಹಳಷ್ಟು ಇದೆ. ಹಿಂದೆ ಆಕ್ಟ್ರಾಯ್ ಇದ್ದಾಗ ಸಂಪನ್ಮೂಲದ ಕೊರತೆ ಇರಲಿಲ್ಲ. ಈ ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರಬೇಕೆನ್ನುವುದು ನನ್ನ ಇಚ್ಛೆಯಾಗಿದೆ. ಆಕ್ಟ್ರಾಯ್ ಪದ್ಧತಿಯನ್ನು ತರಲಿಲ್ಲವೆಂದರೆ, ಪ್ರತಿ ಸಲವೂ ಅನುದಾನಕ್ಕೋಸ್ಕರ ಪುರಸಭೆಯವರು ಮತ್ತು ನಗರಸಭೆಯವರು ಬಂದು ಸರ್ಕಾರವನ್ನು ಕೇಳತಕ್ಕಂಥದ್ದು ಸರಿಯಲ್ಲ ಮತ್ತು ಅದು ಗೌರವವಲ್ಲ. ಆದ್ದರಿಂದ ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರುವುದಕ್ಕೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ?

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯ್ ಪದ್ಧತಿ ಬಹಳ ಹಳೆಯ ಪದ್ಧತಿಯಾಗಿದ್ದರಿಂದ ಶ್ರೀಮಾನ್ ದೇವರಾಜ ಅರಸ್ ಅವರ ಕಾಲದಲ್ಲಿ ಎಂಟ್ರಿ ಟ್ಯಾಕ್ಸನ್ನು ಜಾರಿಗೆ ತಂದಿರುವಂಥದ್ದಾಗಿದೆ. ಹೆಚ್ಯಾಸ್‌ಮೆಂಟ್ ತಪ್ಪಿಸಲಿಕ್ಕೋಸ್ಕರ ಆ ಎಂಟ್ರಿ ಟ್ಯಾಕ್ಸ್‌ನಿಂದ ಬಂದಂಥ ಹಣವನ್ನು ಆಯಾಯ ಸಂಸ್ಥೆಗಳಿಗೆ ಅವರವರ ಪಾಲನ್ನು ಕೊಡುವಂಥ ವ್ಯವಸ್ಥೆ ಇವತ್ತು ಆಗಿರುವಂಥದ್ದಾಗಿದೆ. ಪುನಃ ಆಕ್ಟ್ರಾಯಿ ಪದ್ಧತಿಯನ್ನು ರೀ-ಇಂಟ್ರಡ್ಯೂಸ್ ಮಾಡಿದರೆ ಅಲ್ಲಿ ನಡೆಯುವಂಥ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಪುನಃ ಆಕ್ಟ್ರಾಯ್ ವಸೂಲಾತಿಗಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವುದು, ಮತ್ತು ಅವರನ್ನು ಮೈನ್‌ಟೇನ್ ಮಾಡುವುದು ಆ ಸಂಸ್ಥೆಗಳಿಗೆ ಅದು ಹೊರೆ ಆಗುತ್ತದೆ. ''ನಮಗೆ ಆಕ್ಟ್ರಾಯಿ ಕೊಡಿ, ಬೇರೆ ರಾಜ್ಯಗಳಲ್ಲಿ ಆಕ್ಟ್ರಾಯಿ ಪದ್ಧತಿ ಇದ್ದು ಅಲ್ಲಿಯ ಸಂಸ್ಥೆಗಳು ಸಂಪನ್ಮೂಲದಲ್ಲಿ ಬಹಳ ಚೆನ್ನಾಗಿ ಇದ್ದಾರೆ'' ಎಂದು ಈಗಾಗಲೇ ಸ್ಥಳೀಯ ಸಂಸ್ಥೆಗಳು ಇದರ ಬಗ್ಗೆ ಸರ್ಕಾರಕ್ಕೆ ಒತ್ತಡ ತಂದಿದ್ದಾರೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆಕ್ಟ್ರಾಯಿ ಅನ್ನು ರಿ-ಇಂಟ್ರಡ್ಯೂಸ್ ಮಾಡಬೇಕೇ ಅಥವಾ ಬೇಡವೇ, ಇದೇ ಸಿಸ್ಟಮ್‌ನಲ್ಲಿ ಹಣವನ್ನು ಅವರಿಗೆ ಹೆಚ್ಚಿಗೆ ತೊಡಗಿಸಿಕೊಡಬೇಕೇ ಎನ್ನುವುದರ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲ.

ಅಧ್ಯಕ್ಷರು: ಶ್ರೀ ಶಿವಾನಂದ ಎಸ್.ಪಾಟೀಲ್‌ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1439ನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

ವಿಷಯ: ತುಮಕೂರು ನಗರಸಭೆ ವ್ಯಾಪ್ತಿಯಲ್ಲಿನ ನಗರ ರಸ್ತೆಗಳ ನಿರ್ಮಾಣ.

242 (1522)

ಶ್ರೀ ಎಸ್.ಶಿವಣ್ಣ (ತುಮಕೂರು): ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?